# ಪ್ರಾಯೋಗಿಕ ಶಿಕ್ಷಣ:
# ಪ್ರಾಥಮಿಕ ಶಿಕ್ಷಣದ ಡಿಪ್ಲೊಮಾ ಕೋರ್ಸಿನ ಒಂದು ಅವಲೋಕನ

ಶಾಲಿನಿ ಝಾ



ಪ್ರಾಥಮಿಕ ಶಿಕ್ಷಣದ ಡಿಪ್ಲೊಮಾ ಕೋರ್ಸ್ ಎರಡು ವರ್ಷಗಳ ಅವಧಿಯದ್ದಾಗಿದ್ದು ಇದನ್ನು ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು (SERTC) ಹಮ್ಮಿಕೊಂಡಿದೆ. ಇದರ ಉದ್ದೇಶ ಈ ಕೋರ್ಸಿಗೆ ಸೇರಿದ ವಿದ್ಯಾರ್ಥಿಗಳ ಕೌಶಲವೃದ್ಧಿ ಮತ್ತು ಅವರ ಪರಿಣತಿಯ ಮಟ್ಟವನ್ನು ಸುಧಾರಿಸಿ ಹರಿತಗೊಳಿಸುವುದಾಗಿದೆ. ನಿಯತ ಕೋರ್ಸಿನಲ್ಲಿ ನೀಡಲಾಗುವ ತರಬೇತಿಯ ಮಟ್ಟಕ್ಕೆ ಸಮವಾಗಿ ಇರುವಂತೆ ಇದರ ವಿನ್ಯಾಸವನ್ನು ಮಾಡಲಾಗಿದೆ.

ಈ ಡಿಪ್ಲೊಮಾ ಕೋರ್ಸಿನ ಒಟ್ಟಾರೆ ರೂಪು ರೇಷೆಯು ವಿಭಿನ್ನವಾಗಿ ಇದೆಯಾದರೂ, ಇಲ್ಲಿ ವಿದ್ಯಾರ್ಥಿಗಳಿಗೆ ಕೊಡುವ ತರಬೇತಿ ಮತ್ತು ಅವರು ಬೆಳೆಸಿಕೊಳ್ಳುವ ಕೌಶಲಗಳು ನಿಯತ ಕೋರ್ಸಿಗೆ ದಾಖಲಾಗುವವರ ಮಟ್ಟಕ್ಕೆ ಸರಿಸಮವಾಗಿರುತ್ತವೆ. ಇಲ್ಲಿ ಶಿಕ್ಷಣಾರ್ಥಿಗಳು ವಾರದಲ್ಲಿ ಒಂದು ದಿನ, ಶನಿವಾರ ಅಥವಾ ಭಾನುವಾರ ತರಗತಿಗಳಿಗೆ ಹಾಜರಾಗಬೇಕು. ಆ ದಿನ ಅವರು ತಮ್ಮ ಕಲಿಕೆಯ ಭಾಗವಾಗಿ ಯಾವುದಾದರೂ ಶಾಲೆಯಲ್ಲಿ ಬೋಧನೆ ಮಾಡಬೇಕು. ಆ ಮೂಲಕ ಶಿಕ್ಷಣಾರ್ಥಿಗಳು ತರಬೇತಿಯನ್ನು ಪಡೆಯುವುದಲ್ಲದೆ ಅವರ ಕೌಶಲಗಳೂ ಸುಧಾರಿಸುತ್ತವೆ. ಅದರ ಜೊತೆಗೆ ಅವರಿಗೆ ಪ್ರಾಯೋಗಿಕ ಅನುಭವ (ಪ್ರತ್ಯಕ್ಷಾನುಭವ) ಪಡೆಯುವುದಕ್ಕೂ ಸಾಧ್ಯವಾಗುತ್ತದೆ. ಸಮತೋಲನ ಸಾಧಿಸಿದ ಮತ್ತು ಅತ್ಯಗತ್ಯವಾದ ಪ್ರಾಯೋಗಿಕ ಅನುಭವ ನೀಡುವ ಮೂಲಕ ಶಿಕ್ಷಣಾರ್ಥಿಗಳ ಪ್ರತಿಭೆಯನ್ನು ಹರಿತಗೊಳಿಸಲಾಗುತ್ತದೆ. ಅವರು ತಾಂತ್ರಿಕವಾಗಿ ಮತ್ತು ಪ್ರಾಯೋಗಿಕವಾಗಿ ಪರಿಣತಿ ಹೊಂದಿದ ಅರ್ಹ ಅಭ್ಯರ್ಥಿಗಳಾಗುತ್ತಾರೆ.

### ಪಠ್ಯಕ್ರಮ

ಹಲವು ಸುತ್ತುಗಳ ಮಂಥನ, ಮರು ಓದು ಮತ್ತು ಪರಿಷ್ಕರಣೆಯ ನಂತರ ಈ ಕೋರ್ಸಿನ ಪಠ್ಯಕ್ರಮವನ್ನು ರಚಿಸಲಾಗಿದೆ ಮತ್ತು ನಿಯತ ಕೋರ್ಸಿಗೆ ಸರಿಸಮನಾಗಿರುವಂತೆ ವಿನ್ಯಾಸ ಮಾಡಲಾಗಿದೆ. ಎಲ್ಲಾ ರೀತಿಯಲ್ಲಿಯೂ ವಿಶೇಷವಾಗಿ, ಅಗತ್ಯವಿರುವ ಎಲ್ಲಾ ಪರಿಕರಗಳನ್ನು ನಿರ್ದಿಷ್ಟವಾಗಿ ಈ ಗುಂಪಿನ ಅಗತ್ಯಗಳಿಗೆ ಸರಿಹೊಂದುವಂತೆ ರಚಿಸಲಾಗಿದೆ. ಶಿಕ್ಷಕರಿಗೆ ಅರ್ಥಮಾಡಿಕೊಳ್ಳುವುದಕ್ಕೆ ಸುಲಭವಾಗಿರುವಂತೆ ಕಲಿಕಾ ಬೋಧನಾ ಸಾಮಗ್ರಿಗಳಿದ್ದವು. ಅವನ್ನು ಅಷ್ಟೇ ಸುಲಭವಾಗಿ ಪಠ್ಯಕ್ರಮದಲ್ಲಿ ಅಳವಡಿಸಬಹುದಾಗಿದೆ ಮತ್ತು ಸಂಪೂರ್ಣವಾಗಿ ಗುಣಮಟ್ಟಕ್ಕೆ ಒತ್ತು ನೀಡಲಾಗಿದೆ.

### ಅಂತರ ವಿಭಾಗೀಯ (Interdepartmental) ಸಹಭಾಗಿತ್ವ

ಶಿಕ್ಷಣಾರ್ಥಿಗಳು ಪಠ್ಯಕ್ರಮ ಬೋಧಕರ ಮತ್ತು ಸಂಪನ್ಮೂಲ ವ್ಯಕ್ತಿಗಳ ಜೊತೆ ಸಂಪರ್ಕದಲ್ಲಿರುವಂತೆ ಅಡೆತಡೆಗಳಿಲ್ಲದ ಆಡಳಿತಾತ್ಮಕ ಕ್ರಮಗಳನ್ನು ರೂಪಿಸಲಾಗಿತ್ತು. ಮುಂದುವರಿದು, ಅಂತಹ ಸಂಪರ್ಕ ಎಸ್ ಸಿಇಆರ್ ಟಿ ಮತ್ತು ತರಬೇತಿ ಕೇಂದ್ರದ ಜೊತೆಗೂ ಸಾಧ್ಯವಿತ್ತು. ಇದು ಶಿಕ್ಷಣಾರ್ಥಿಗಳಿಗೆ ಪಠ್ಯಕ್ರಮ ಸಾಮಗ್ರಿಗಳನ್ನು ಸಕಾಲಕ್ಕೆ ಪಡೆಯುವುದಕ್ಕೆ, ಮತ್ತು ಕಾರ್ಯಾಗಾರ ಮತ್ತು ತರಗತಿಗಳಲ್ಲಿ ಸಕಾಲದಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಯಿತು. ಪಠ್ಯಕ್ರಮದ ಸಂರಚನೆಯನ್ನು ಮತ್ತು ಪಠ್ಯಕ್ರಮ ಪರಿಕರಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಿದಂತೆ ಅವು ಸಿಗುವಂತಾಗಲು, ಎಲ್ಲಾ ಸಂಪರ್ಕ ಜಾಲಗಳಲ್ಲೂ ಒದಗಿಸಲಾಗುತ್ತಿತ್ತು. ಆ ಮೂಲಕ ಅಂತರ್ ವಿಭಾಗೀಯ ಸಂಪರ್ಕ ಮತ್ತು ಸಂವಹನಗಳ ಕೊರತೆಯ ಕಾರಣಕ್ಕೆ ಶಿಕ್ಷಣಾರ್ಥಿಗಳಿಗೆ ನೀಡಬೇಕಾದ ಪಠ್ಯಕ್ರಮ ಸಂಬಂಧೀ ಸಾಮಗ್ರಿಗಳನ್ನು ಒದಗಿಸುವಲ್ಲಿ ಆಗುವ ವಿಳಂಬವನ್ನು ತಪ್ಪಿಸಲಾಯಿತು.

### ಡಿಜಟಲೀಕರಣ ಮತ್ತು ಸುಲಭಾವಕಾಶಗಳು

ಶಿಕ್ಷಣಾರ್ಥಿಗಳಿಗೆ ಪಠ್ಯಕ್ರಮದ ಎಲ್ಲಾ ಪರಿಕರಗಳನ್ನು ಮುದ್ರಣ ರೂಪದಲ್ಲಿ ಕೊಡುವುದಷ್ಟೇ ಅಲ್ಲದೆ ಆನ್ ಲೈನ್ ನಲ್ಲೂ ಸಿಗುವಂತೆ ಮಾಡಲಾಯಿತು. ಇದರ ಜೊತೆಗೆ ಪಠ್ಯಕ್ರಮದ ವೇಳಾಪಟ್ಟಿ ಮತ್ತು ಸಂರಚನೆಯ ವಿವರವೂ ಸಿಗುತ್ತಿತ್ತು. ಬೋಧನಾ- ಕಲಿಕಾ ಪ್ರಕ್ರಿಯೆಗೆ ಪೂರಕವಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ICT) ಪರಿಕರಗಳನ್ನೂ ಬಳಸಿ, ಶಿಕ್ಷಣಾರ್ಥಿಗಳಿಗೆ ಲ್ಯಾಪ್ ಟಾಪ್ ಮತ್ತು ಸ್ಮಾರ್ಟ್ ಫೋನ್ ಗಳನ್ನು ಬೋಧನಾ ಉದ್ದೇಶಕ್ಕೆ ಬಳಸುವಂತೆ ಸೂಚನೆ ನೀಡಲಾಗಿತ್ತು. ತರಬೇತಿಯ ಭಾಗವಾಗಿ ಕಾರ್ಯಾಗಾರಗಳಲ್ಲಿ ನಡುನಡುವೆ ವಿಡಿಯೋಗಳನ್ನು ತೋರಿಸಲಾಯಿತು. ಸಂಪೂರ್ಣ ಕಾರ್ಯವಿಧಾನವನ್ನು ಮತ್ತು ವೇಳಾಪಟ್ಟಿಯನ್ನು ಕಾಲ ಕಾಲಕ್ಕೆ ಆನ್ ಲೈನ್ ನಲ್ಲಿ ನವೀಕರಿಸಲಾಗುತ್ತಿತ್ತು.

### ನೋಂದಣಿ

ವಿದ್ಯಾರ್ಥಿಗಳ ಒಂದು ಸಣ್ಣ ತಂಡವನ್ನು ನೋಂದಣಿ ಮಾಡಿ ಕೊಳ್ಳಲಾಯಿತು. ಅವರ ಸಾಮರ್ಥ್ಯ ಅಭಿವೃದ್ಧಿಗೆ ಕಾರ್ಯಾಗಾರ ಗಳನ್ನು ಸಂಪನ್ಮೂಲ ವ್ಯಕ್ತಿಗಳು ಸಂಘಟಿಸಿದರು. ಆ ಸಂಪನ್ಮೂಲ ವ್ಯಕ್ತಿಗಳು ಮಾರ್ಗದರ್ಶಕರ ಜೊತೆಗೂಡಿ ಕೆಲಸ ಮಾಡಿದರು.

### ಮೌಲ್ಯಮಾಪನ

ಶಿಕ್ಷಣಾರ್ಥಿಗಳಿಗೆ ಕೊಟ್ಟ ಕಾರ್ಯನಿಯೋಜನೆಗಳು ತರಗತಿ ಆಧಾರಿತ ಪ್ರಾಯೋಗಿಕ ಪ್ರಶ್ನೆಗಳನ್ನು ಒಳಗೊಂಡಿದ್ದವು. ಅವುಗಳಿಗೆ ವಿಮರ್ಶಾತ್ಮಕವಾದ ವಿಶ್ಲೇಷಣಾತ್ಮಕವಾದ ಉತ್ತರಗಳನ್ನು ಬರೆಯ ಬೇಕಿತ್ತು. ಶಿಕ್ಷಣಾರ್ಥಿಗಳ ಪ್ರಾಯೋಗಿಕ ಅನುಭವಗಳನ್ನು ಗಮನದಲ್ಲಿರಿಸಿಕೊಂಡು ಕಾರ್ಯನಿಯೋಜನೆಗಳನ್ನು ವಹಿಸಲಾಯಿತು. ಮತ್ತು ಅವುಗಳನ್ನು ಕಲಿಕಾ ಪ್ರಕ್ರಿಯೆಯ ನಿರ್ಣಾಯಕ ಭಾಗವಾಗಿರುವಂತೆಯೂ ವಿನ್ಯಾಸ ಮಾಡಲಾಗಿತ್ತು. ಬೋಧನೆಯಲ್ಲಿ ಶಿಕ್ಷಣಾರ್ಥಿಗಳ ಅನುಭವವನ್ನು ಪರಿಗಣಿಸಿ ಅವನ್ನು ರೂಪಿಸಲಾಗಿತ್ತು. ಹಾಗಾಗಿ ಕಾರ್ಯನಿಯೋಜನೆಯಲ್ಲಿ ಶ್ರಮ ಹಾಕುವ ಶಿಕ್ಷಣಾರ್ಥಿಗಳು ತಮ್ಮೆಲ್ಲ ಬೌದ್ಧಿಕ ಸಾಮರ್ಥ್ಯಗಳನ್ನು ಪೂರ್ಣಪ್ರಮಾಣದಲ್ಲಿ ಬಳಸಬೇಕಾದ ಅನಿವಾರ್ಯತೆ ಇತ್ತು.

ಕಾರ್ಯನಿಯೋಜನೆಯ ಪ್ರಶ್ನೆಗಳ ವಿಶ್ಲೇಷಣೆಯೇ, ವಿದ್ಯಾರ್ಥಿಗಳು ತಮ್ಮ ಕಲಿಕಾ ಪ್ರಕ್ರಿಯೆಯನ್ನು ಅರ್ಥೈಸಿಕೊಂಡಿರುವು ದರ ಮತ್ತು ಅವರು ತಮ್ಮ ಪ್ರಾಯೋಗಿಕ ಅನುಭವಗಳನ್ನು ತಮ್ಮದೇ ವ್ಯಕ್ತಿಗತ ವಿಮರ್ಶಾತ್ಮಕ ಮೌಲ್ಯಮಾಪನಕ್ಕೆ ಒಳಪಡಿಸುವುದರ ಒಂದು ಪರೀಕ್ಷೆಯಾಗಿತ್ತು. ಆಮೂಲಕ ವಿದ್ಯಾರ್ಥಿಗಳು ಸೂಕ್ತವಲ್ಲದ ರೀತಿಯಲ್ಲಿ ತಮ್ಮ ಕಾರ್ಯನಿಯೋಜನೆಯನ್ನು ಮಾಡಿಬಿಡುವ ಯಾವುದೆ ಅವಕಾಶವೂ ಇರಲಿಲ್ಲ.

ಇದಿಷ್ಟಲ್ಲದೆ, ಶಾಲಾ ಆವರಣದಲ್ಲಿಯೇ ಆಗಾಗ ವಿದ್ಯಾರ್ಥಿಗಳ ಪರಿಶೀಲನೆ ನೆಡೆಸಿ ಪೂರ್ವಯೋಜನೆಯಂತೆ ಕಾರ್ಯ ನಿಯೋಜನೆಯನ್ನು ಸರಿಯಾಗಿ ಕೈಗೊಳ್ಳಲಾಗುತ್ತಿದೆಯೇ ಎಂದು ಪರಿಶೀಲಿಸಲಾಗುತ್ತಿತ್ತು.

**ಕಲಿಕಾ ಯೋಜನೆಗಳು**

ಬೋಧನಾ ಕ್ರಮ ಅಥವಾ ಜ್ಞಾನದ ಆಳವು ಸಂಪೂರ್ಣವಾಗಿ ಮಗು ಕೇಂದ್ರಿತವೇ ಆಗಿರಬೇಕು. ಇದರ ಗುರಿಯು ಮಕ್ಕಳ ಮಟ್ಟವನ್ನು ತಲುಪುವುದಕ್ಕೆ ಬೇಕಾದಂತೆ ನಮ್ಯವಾಗಿರುವುದೇ ಆಗಿದೆ. ಕಲಿಕಾ ಯೋಜನೆಗಳನ್ನು ಸಿದ್ದಪಡಿಸುವುದಕ್ಕೆ ವಿಶೇಷ ಗಮನವನ್ನು ಕೊಡಲಾಯಿತು. ಅವು ಶಾಲೆಗೆ ಬೇಕಾದ ಬಹಳಷ್ಟು ಚಟುವಟಿಕೆಗಳನ್ನು ಒಳಗೊಂಡಿದ್ದವು. ಅದಕ್ಕಾಗಿ ಪ್ರತ್ಯೇಕ ಖಾತಾ ಪುಸ್ತಕಗಳನ್ನು ಮತ್ತು ದಾಖಲೆ ಪುಸ್ತಕಗಳನ್ನು ಇಡಲಾಗಿತ್ತು. ಇದರ ಹೊರತಾಗಿ ಕೈಗೊಂಡ ಚಟುವಟಿಕೆಗಳ ದಿನಚರಿಯನ್ನು ಬರೆದಿಡುವಂತೆ ಶಿಕ್ಷಣಾರ್ಥಿಗಳಿಗೂ ಸೂಚನೆ ನೀಡಲಾಗಿತ್ತು. ಆಮೂಲಕ ಅವರು ತಮ್ಮ ನಿರ್ವಹಣೆಯ ದಾಖಲಾತಿಯನ್ನು ತಾವೇ ಮಾಡಿಕೊಂಡರು. ಇವೆಲ್ಲವೂ ತರಗತಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಶಾಲೆಯೊಳಗೆ ಕೈಗೊಳ್ಳುವ ಕ್ರಿಯಾಸಂಶೋಧನಾ ಯೋಜನೆಯ ಭಾಗವೇ ಆಗಿದ್ದವು. ಈ ಪೂರ್ತಿ ಪ್ರಕ್ರಿಯೆಯ ಭಾಗವಾಗಿ ಸೂಕ್ಷ್ಮ ಮತ್ತು ತೀಕ್ಷ್ಣ ಅವಲೋಕನ ಮತ್ತು ಮೌಲ್ಯಮಾಪನಗಳು ಇದ್ದವು.

ಎಸ್ ಸಿಎಸ್ ಪರಿವೀಕ್ಷಣಾ ತಂಡವು 40 ರಿಂದ 50 ಸದಸ್ಯರ ಬಲವನ್ನು ಹೊಂದಿತ್ತು. ಶಿಕ್ಷಣಾರ್ಥಿಗಳಿಗೆ ಬೆಂಬಲ ಕೊಡುವುದು ಮತ್ತು ಮೇಲುಸ್ತುವಾರಿ ಮಾಡುವುದು ಮತ್ತು ಆ ಕುರಿತು ವಿವರವಾದ ವರದಿ ಮಾಡುವುದು ಅವರ ಕಾರ್ಯಭಾರವಾಗಿತ್ತು. ಶಿಕ್ಷಣಾರ್ಥಿಗಳು ಅವರ ಉಸ್ತುವಾರಿಯಲ್ಲಿ ಕಾರ್ಯಗಾರಗಳಿಗೆ ನಿಯಮಬದ್ಧವಾಗಿ ಹಾಜರಾಗುವುದನ್ನು ನಿರಿಕ್ಷಿಸಲಾಗಿತ್ತು.

**ಉಪಸಂಹಾರ**

ಹೊಸ ಶಿಕ್ಷಕರನ್ನು ಪ್ರಾಥಮಿಕ ಶಿಕ್ಷಣದ ಡಿಪ್ಲೊಮಾ ಕಾರ್ಯಕ್ರಮದ ಅಡಿಯಲ್ಲಿ ತರಬೇತಿಗೊಳಿಸುವ ಉದ್ದೇಶದೊಂದಿಗೆ ಪ್ರಾರಂಭಿಸಲಾದ ಕಾರ್ಯಕ್ರಮವು, ಈ ಎಲ್ಲಾ ವಿಧದ ಮತ್ತು ಪರಸ್ಪರ ಪೂರಕ ಚಟುವಟಿಕೆಗಳ ಒಟ್ಟು ಪರಿಣಾಮವಾಗಿ ಹೆಚ್ಚಿನ ಮಟ್ಟದಲ್ಲಿ ಯಶಸ್ವಿಯಾಯಿತು. ಅದು ನಿಯತ ಕೋರ್ಸಿನ ಕಲಿಕಾ ವಿನ್ಯಾಸಗಳಿಗೆ ಸಮನಾಗಿ ಇರುವಂತೆ ನೋಡಿಕೊಳ್ಳಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲರ ಶ್ರಮದಿಂದ ಕೂಡಿದ ಕೆಲಸ ಫಲಪ್ರದವಾಯಿತು ಎಂಬುದು ಸ್ಪಷ್ಟವಾಗಿತ್ತು. ಶಿಕ್ಷಣಾರ್ಥಿಗಳ ತಂತ್ರಗಳಲ್ಲಿ, ಕೌಶಲಗಳಲ್ಲಿ ಸುಧಾರಣೆಯಾಗಿದ್ದು ಮತ್ತು ವಿಸ್ತಾರವಾದ ಜ್ಞಾನಗಳಿಸಿಕೊಂಡದ್ದು ಎದ್ದು ಕಾಣುವಂತಿತ್ತು. ಹಿಂದಿರುಗಿ ನೋಡಿದಾಗ, ಡಿಪ್ಲೊಮಾ ಕೋರ್ಸ್ ಒಂದು ಯಶಸ್ವಿ ಪ್ರಯೋಗವಾಗಿತ್ತು ಮತ್ತು ಇದನ್ನು ಮುಂದುವರಿಸಬೇಕು ಎಂದು ಹೇಳಬಹುದು.

● ಅನುವಾದಕರು: **ರಾಮಕೃಷ್ಣ ಭಟ್** | ಪರಿಶೀಲಕರು: **ನಾಗಮಣಿ ಎಸ್ ಎನ್**

**ಶಾಲಿನಿ ಝಾ:** ಇವರು ಬಿಹಾರ ರಾಜ್ಯದ ಪೂರ್ನಿಯದ ಸರಕಾರಿ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. ಇವರು ಶಿಕ್ಷಣದಲ್ಲಿ ಪದವಿಯನ್ನು ಮತ್ತು ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಒಡಿಇಎಎಲ್(ODEAL)ನಲ್ಲಿ ಸಂಪನ್ಮೂಲವ್ಯಕ್ತಿಯೂ ಪ್ರಶಿಕ್ಷಕರ ಶಿಕ್ಷಕರೂ ಆಗಿದ್ದಾರೆ. ಬಿಹಾರದ ಪೂರ್ನಿಯ ಜಿಲ್ಲೆಯೊಳಗೆ ವಿಪತ್ತು ನಿರ್ವಹಣಾ ಸಂಯೋಜಕರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ. ಅವರ ಸಂಪರ್ಕಕ್ಕೆ: shalinijha443@gmail.com